## ಧಾರಾವಾಹಿ ಲೇಖನ

# ಶ್ರೀರಾಮಕೃಷ್ಣರ ಅಪ್ರಸಿದ್ಧ ಭಕ್ತರು

ಸ್ವರ್ಣಗೌರಿ

(ಹಿಂದಿನ ಸಂಚಿಕೆಯಿಂದ)

### ಪ್ರಭುದಯಾಲ ಮಿಶ್ರ

ಮದುವೆ ಮನೆಯಲ್ಲಿ ಸಂಭ್ರಮವೋ ಸಂಭ್ರಮ. ಜನರೆಲ್ಲಾ ಸಡಗರದಿಂದ ಓಡಾಡುತ್ತಿದ್ದಾರೆ. ಎಲ್ಲೆಲ್ಲಿಯೂ ಮಾತುಕತೆ, ನಗು, ಉಲ್ಲಾಸ. ಒಟ್ಟಿನಲ್ಲಿ ಆನಂದಕರ, ಹಿತಕರ ವಾತಾವರಣ. ಇನ್ನೇನು ಮುಹೂರ್ತದ ವೇಳೆ ಹತ್ತಿರವಾಗುತ್ತಿದೆ. ಆದರೆ ಇದ್ದಕ್ಕಿದ್ದಂತೆ 'ಧಪ್! ಧಪ್!' ಎಂಬ ಶಬ್ದದ ಜೊತೆಯಲ್ಲಿಯೇ 'ಅಯ್ಯೋ' ಎಂಬ ಆರ್ತನಾದ ಕೂಡ ಕೇಳಿಬರುತ್ತಿದೆ. ಎಲ್ಲರೂ ಬೆಚ್ಚಿಬಿದ್ದು ಶಬ್ದ ಬಂದ ದಿಕ್ಕಿನೆಡೆ ಓಡಿದರು. ಅಷ್ಟು ಸುಂದರವಾಗಿ ಕಟ್ಟಿದ್ದ ಶಾಮಿಯಾನ ಇದ್ದಕ್ಕಿದ್ದ ಹಾಗೆ ಬಿದ್ದುಹೋಗಿದೆ ಮತ್ತು ಮುಂದಿನ ದೃಶ್ಯ ಇನ್ನೂ ಬೀಭತ್ಸಕರವಾದದ್ದು. ಶಾಮಿಯಾನದ ಅಡಿಯಲ್ಲಿ ಒಂದಲ್ಲ ಎರಡು ಹೆಣಗಳು! ಒಂದು ವರನದ್ದು, ಮತ್ತೊಂದು ವರನ ಸಹೋದರನದು! ವಿಧಿ ಎಷ್ಟು ಕ್ರೂರ!!

ವರನ ಕೊನೆಯ ತಮ್ಮನಾದ ಪ್ರಭುದಯಾಲ ಮಿಶ್ರ ಈ ಭೀಕರ ದೃಶ್ಯವನ್ನು ಕಂಡ ತಕ್ಷಣವೇ ಪ್ರಪಂಚವನ್ನು ತ್ಯಾಗ ಮಾಡಿ ವೈರಾಗ್ಯ ಜೀವನವನ್ನು ಆರಿಸಿಕೊಂಡನು. ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಮಿಶ್ರನ ಹೃದಯದಲ್ಲಿ ಮೊದಲೇ ಸಣ್ಣದಾಗಿ ಉರಿಯುತ್ತಿದ್ದ ವೈರಾಗ್ಯದ ಜ್ವಾಲೆ ಈ ಘಟನೆಯಿಂದ ಜ್ವಾಜ್ವಲ್ಯಮಾನವಾಗಿ ಉರಿಯತೊಡಗಿತು.

ಸಂಸಾರವನ್ನು ತ್ಯಜಿಸಿ ಕಾಡಿಗೆ ಹೋಗಿ ಒಂದು ಗುಹೆಯಲ್ಲಿ ತೀವ್ರ ಸಾಧನೆಯಲ್ಲಿ ತೊಡಗಿದ ಮಿಶ್ರನಿಗೆ ಒಂದು ದಿನ ಏಸುಕ್ರಿಸ್ತನ ದಿವ್ಯದರ್ಶನವಾಯಿತು; ಅಲ್ಲಿ ಕಂಡ ದಿವ್ಯಸೌಂದರ್ಯದ ಮುಂದೆ ಎಂತಹ ರೂಪವತಿಯ ಸೌಂದರ್ಯವೂ ತೃಣಸಮಾನವೆನಿಸಿತು. ಚಿಕ್ಕಂದಿನಿಂದಲೂ ಜ್ಯೋತಿಯ ದರ್ಶನವಾಗುತ್ತಿದ್ದ ಮಿಶ್ರನಿಗೆ ಈಗ ಏಸುವಿನ ದರ್ಶನವಾಯಿತು. ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರೂ ಯಾವುದೋ ಭಾಗ್ಯವಶಾತ್ ಏಸುವಿನ ನಾಮದಲ್ಲಿ ರುಚಿ ಮೂಡಿದ ಕಾರಣ ಮಿಶ್ರನು ಕ್ರೈಸ್ತ ಧರ್ಮದ ಪ್ರೊಟೆಸ್ಟೆಂಟ್ ಪಂಗಡದ ದೀಕ್ಷೆ ತೆಗೆದುಕೊಂಡಿದ್ದನು. ಆದರೂ ನಿತ್ಯವೂ ಯೋಗಶಾಸ್ತ್ರವನ್ನು ಓದುತ್ತಿದ್ದನು; ಅದರಂತೆ ಸಾಧನೆಯನ್ನು ಮಾಡುತ್ತಿದ್ದನು. ಯೋಗದಲ್ಲಿ ಆಹಾರದ ಬಗ್ಗೆ ನೀಡಿರುವ ಎಚ್ಚರಿಕೆ ಪಾಲಿಸಲು ದಿನನಿತ್ಯ ತಾನೇ ಹವಿಷ್ಯಾನ್ನವನ್ನು ತಯಾರು ಮಾಡಿ ಕೊಳ್ಳುತ್ತಿದ್ದನು.

ಮತ್ತೊಂದು ದಿನ ಮಿಶ್ರನಿಗೆ ಆದ ದಿವ್ಯದರ್ಶನ ಇಲ್ಲಿ ಉಲ್ಲೇಖನೀಯ. ನದೀ ತೀರದಲ್ಲಿ ಬಹು ಸುಂದರವಾದ ಒಂದು ತೋಟದಲ್ಲಿ ಯೋಗಿಯೊಬ್ಬರು ಸಮಾಧಿಸ್ಥರಾಗಿದ್ದಾರೆ. ಆ ಯೋಗಿಯ ವದನದಿಂದ ಹೊರಹೊಮ್ಮುತ್ತಿದ್ದ ಕಾಂತಿಯನ್ನು ಕಂಡು ಮಿಶ್ರನು ನಿಬ್ಬೆರಗಾದನು. ಯೋಗಿ ಯಾರೆಂದು ತಿಳಿಯ ಲಿಲ್ಲವಾದರೂ ಮತ್ತೊಮ್ಮೆ ಆ ಯೋಗಿಯ ದರ್ಶನಕ್ಕಾಗಿ ಶತಪ್ರಯತ್ನಪಟ್ಟನು. ಆದರೆ ಮತ್ತೊಮ್ಮೆ ಅಂತಹ ದರ್ಶನವಾಗಲೇ ಇಲ್ಲ. ಅಂದಿನಿಂದ ಆ ಯೋಗಿಯನ್ನು ಹುಡುಕುತ್ತಾ ದೇಶದ ಉದ್ದಗಲಕ್ಕೂ ಸಂಚರಿಸುತ್ತಿದ್ದನು.

೩೧ ನೇ ಅಕ್ಟೋಬರ್, ೧೮೮೫ ರಂದು ಮಿಶ್ರನು ತಾನು ಕನಸಿನಲ್ಲಿ ಕಂಡ ಯೋಗಿಯನ್ನು ಅರಸುತ್ತಾ ದಕ್ಷಿಣೇಶ್ವರದ ಶ್ರೀರಾಮಕೃಷ್ಣರ ಕೊಠಡಿಗೆ ಬಂದನು. ನಸುಗೆಂಪು ಬಣ್ಣದ, ಬಟ್ಟಲುಗಣ್ಣಿನ ಗಡ್ಡಧಾರಿಯಾಗಿ, ಕೈಯಲ್ಲೊಂದು ಕೋಲು ಹಿಡಿದು ಐರೋಪ್ಯರ ಉಡುಪನ್ನು ಧರಿಸಿದ್ದ ಈ ಆಗಂತುಕನು ಕೊಠಡಿಯನ್ನು ಪ್ರವೇಶಿಸಿದನು. ಅಭ್ಯಾಸದಂತೆ ಪರಮಹಂಸರೇ ಮೊದಲು ಆಗಂತುಕನನ್ನು ಸ್ವಾಗತಿಸಿ, ಆಸನವನ್ನು ನೀಡಿದರು. ಪರಸ್ಪರ ಪರಿಚಯವಾದ ನಂತರ ಸ್ವಲ್ಪ ಹೊತ್ತು ಇಬ್ಬರೂ ಮೌನವಾಗಿದ್ದರು. ಪರಮಹಂಸರು ಒಬ್ಬ ವ್ಯಕ್ತಿಯ ಒಳಹೊರಗನ್ನು ನೋಡಬಲ್ಲವರಾಗಿದ್ದರಿಂದ ಮಿಶ್ರನ ಆಧ್ಯಾತ್ಮಿಕ ಪ್ರಗತಿಯನ್ನು ಕಂಡು ಸಂತೋಷಪಟ್ಟರು. ಹಾಗೆಯೇ ಮಿಶ್ರನೂ ಸಹ ಬಹಳ ಕಾಲದಿಂದ ಅರಸುತ್ತಿದ್ದ ಆ ಯೋಗಿಯೇ ಶ್ರೀರಾಮಕೃಷ್ಣರು ಎಂದು ಪ್ರಥಮ ನೋಟದಲ್ಲೇ ಕಂಡುಹಿಡಿದು ಆನಂದದಿಂದ ಪುಳಕಿತನಾದನು. ಸ್ವಲ್ಪ ಹೊತ್ತು ಅದು ಇದು ಮಾತುಕತೆಯಾದ ನಂತರ ಮಿಶ್ರನು ಅಲ್ಲಿ ನೆರೆದಿದ್ದ ಭಕ್ತರನ್ನು ಉದ್ದೇಶಿಸಿ, ಶ್ರೀರಾಮಕೃಷ್ಣರೆಡೆಗೆ ಕೈ ತೋರಿಸುತ್ತಾ, ತನ್ನ ವೈಯಕ್ತಿಕ ಅಭಿಪ್ರಾಯವನ್ನು ಅಲ್ಲಿದ್ದ ಭಕ್ತರಿಗೆ ಹೀಗೆ ವ್ಯಕ್ತಪಡಿಸಿದನು: "ಇವರು ಸಾಕ್ಷಾತ್ ಭಗವಂತ. ನಿಮಗೆ ಅವರನ್ನು ಗುರುತಿಸಲಾಗುತ್ತಿಲ್ಲ. ನಾನು ಅವರನ್ನು ಹಿಂದೆ ನನಗಾದ ದರ್ಶನಗಳಲ್ಲಿ ಕಂಡಿದ್ದೇನೆ. ಆದರೆ ಈಗ ಪ್ರತ್ಯಕ್ಷವಾಗಿ ನೋಡುತ್ತಿರುವೆ. ಒಂದು ತೋಟದಲ್ಲಿ ಎತ್ತರದ ಆಸನದಲ್ಲಿ ಇವರು ಕುಳಿತಿದ್ದರು. ಅವರ ಬಳಿ ನೆಲದ ಮೇಲೆ ಇನ್ನೊಬ್ಬನು ಕುಳಿತಿದ್ದನು. ಆದರೆ ಆತನು ಇವರಷ್ಟು ಮುಂದುವರಿದಂತೆ ಕಾಣಲಿಲ್ಲ." ಅಲ್ಲಿ ನೆರೆದಿದ್ದವರೆಲ್ಲರೂ ಮಂತ್ರಮುಗ್ಧರಾದವರಂತೆ ಆ ಆಗಂತುಕನ ಮಾತುಗಳನ್ನು ಕೇಳುತ್ತಿದ್ದರು.

ಬಹಳ ಉತ್ಸುಕನಾಗಿದ್ದ ಮಿಶ್ರನು ಪರಮಹಂಸರಿಗೆ ಅನೇಕ ರೀತಿಯಲ್ಲಿ ತನ್ನ ಭಕ್ತಿಯನ್ನು ವ್ಯಕ್ತಪಡಿಸುತ್ತಿದ್ದನು. ತನ್ನ ನಿಷ್ಠೆ, ತಪಸ್ಸುಗಳಿಂದ ಶರಣಾಗತಭಾವ ಹೊಂದಿ, ಅನೇಕ ಆಧ್ಯಾತ್ಮಿಕ ಅನುಭವಗಳಿಂದ ಆತ ಕೃತಾರ್ಥನಾಗಿದ್ದನು. ಬಳಿಕ ಪರಮ ಹಂಸರು, "ಹೀರಾನಂದನು ವೀರಭಾವದಲ್ಲಿ ನಿಂತಿರುವುದನ್ನು

ದರ್ಶನದಲ್ಲಿ ಕಂಡೆ" ಎಂದು ಹೇಳುತ್ತಾ ಸಮಾಧಿಸ್ಥರಾದರು. ಸ್ವಲ್ಪ ಸಮಯದ ನಂತರ ಅರ್ಧಬಾಹ್ಯಪ್ರಜ್ಞೆಗೆ ಬಂದ ಪರಮಹಂಸರು ಮಿಶ್ರನ ಕೈಹಿಡಿದುಕೊಂಡು, "ನೀನು ಅರಸುತ್ತಿರುವುದನ್ನು ಖಂಡಿತ ಪಡೆಯುವೆ" ಎಂದು ನುಡಿದರು. ಅವರ ದೈವೀ ಮಂದಹಾಸವು ಮಿಶ್ರನ ಹೃದಯವನ್ನು ಸೂರೆಗೊಂಡಿತು. ಭಗವದಾನಂದ ಅವರ ಮುಖದಲ್ಲಿ ಮಿಂಚುತ್ತಿತ್ತು. ಆಶ್ಚರ್ಯಚಕಿತನಾದ ಮಿಶ್ರನು ಕೈಮುಗಿದುಕೊಂಡು, "ಅಂದಿನಿಂದ (ಯೋಗಿಯ ದರ್ಶನವಾದ ದಿನದಿಂದ) ನನ್ನ ತನು ಮನ ಧನಗಳನ್ನು ನಿಮಗೆ ಅರ್ಪಿಸಿ ಬಿಟ್ಟಿರುವೆ" ಎಂದನು. ಸಮಾಧಿ ಅವಸ್ಥೆಯಲ್ಲಿದ್ದ ಪರಮ ಹಂಸರಲ್ಲಿ ಮತ್ತೊಮ್ಮೆ ಕ್ರಿಸ್ತನ ದರ್ಶನ ಪಡೆದ ಮಿಶ್ರನು ಅದರ ಪರಿಣಾಮವಾಗಿ, ಆನಂದಾತಿಶಯದಿಂದ ಅವರನ್ನು ಸ್ತುತಿಸತೊಡಗಿದನು; ಗದ್ಗದ ಕಂಠದಿಂದ ತನ್ನ ಪ್ರಾರ್ಥನೆಯನ್ನು ಸಲ್ಲಿಸಿದನು. ನಂತರ ಭಕ್ತರನ್ನು ಉದ್ದೇಶಿಸಿ, "ಇವರು ಮತ್ತು ಕ್ರಿಸ್ತ ಒಂದೇ. ನಾನು ಇವರಿಬ್ಬರನ್ನೂ ದರ್ಶನದಲ್ಲಿ ಮೊದಲೇ ಕಂಡಿರುವೆ. ಈಗಿನ ಕಾಲಕ್ಕೆ ಇವರೇ ಕ್ರಿಸ್ತ" ಎಂದನು. ಕ್ರೈಸ್ತ ಭಕ್ತನಿಂದ ಬಂದ ಈ ಮಾತುಗಳನ್ನು ಕೇಳಿ ಭಕ್ತರು ರೋಮಾಂಚನ ಗೊಂಡರು. ನರೇಂದ್ರ ಮತ್ತು ಇನ್ನಿತರ ಭಕ್ತರೆಲ್ಲರೂ ಮಿಶ್ರನ ನಿಷ್ಠೆ, ಸಾಧನೆ ಮತ್ತು ಅನುಭವಗಳಿಗೆ ಮಾರುಹೋದರು.

ಶ್ರೀರಾಮಕೃಷ್ಣರು ಮಿಶ್ರನಿಗೆ ದಾಳಿಂಬೆ ಮತ್ತು ಇತರೆ ಹಣ್ಣು ಗಳನ್ನು ನೀಡಿದರು. ಸಂತುಷ್ಟನಾದ ಮಿಶ್ರನು ಅವುಗಳನ್ನು ಪ್ರಸಾದ ವೆಂದು ಎಲ್ಲರಿಗೂ ಹಂಚಿದನು. ಎಲ್ಲರೂ ಜಾತಿಭೇದ ತೊರೆದು ಒಂದೇ ತಟ್ಟೆಯಲ್ಲಿ ತಿಂದರು.

ಯಾರು ನಿಷ್ಠೆಯಿಂದ ಭಗವಂತನನ್ನು ಕೂಗಿ ಕರೆಯು ತ್ತಾರೋ ಅವರೆಲ್ಲರೂ ಇಲ್ಲಿಗೆ (ಪರಮಹಂಸರ ಬಳಿಗೆ) ಮಾರ್ಗ ದರ್ಶನಕ್ಕಾಗಿ ಬರುವರೆಂಬ ಪರಮಹಂಸರ ಭವಿಷ್ಯವಾಣಿಗೆ ಪ್ರತ್ಯಕ್ಷ ಸಾಕ್ಷಿಯಾಗಿದೆ, ಪ್ರಭುದಯಾಲ ಮಿಶ್ರನ ಈ ಭೇಟಿಯ ವೃತ್ತಾಂತ.

## ರಸಿಕ

"ತಂದೆ, ನನ್ನ ಗತಿ ಏನಾಗುವುದು?" ಎಂಬ ಕಳವಳ, ಕಾತರತೆಯ ಧ್ವನಿ ಬಂದೆಡೆ ದೃಷ್ಟಿ ಹರಿಸಿದರು ಶ್ರೀರಾಮಕೃಷ್ಣರು. "ನಿನಗೆ ಎಲ್ಲವೂ ದೊರೆತಿದೆ. ಮರಣಕಾಲದಲ್ಲಿ ನನ್ನನ್ನು ನೋಡುವೆ" ಎನ್ನುತ್ತಾ ಅವರು ಸಮಾಧಿಸ್ಥರಾದರು. ಕಳವಳ, ಕಾತರತೆಯ ಮುಖಭಾವದಲ್ಲಿ ಶಾಂತಿ, ತೃಪ್ತಿ, ಸಮಾಧಾನಗಳು ಮೂಡಿದವು!

ಪ್ರಶ್ನೆ ಕೇಳಿದವನು ದಕ್ಷಿಣೇಶ್ವರ ಮಂದಿರದ ಜಾಡಮಾಲಿ ಯಾದ ರಸಿಕ. ಕೆಳಜಾತಿಯಲ್ಲಿ ಜನಿಸಿದ ರಸಿಕ ಅತ್ಯಂತ ಬಡವ ನಾಗಿದ್ದನು. ಕೇವಲ ಕೆಲವೇ ಮಂದಿ ಭಕ್ತರ ವಿನಾ ಉಳಿದವರ ಪಾಲಿಗೆ ಗೊತ್ತಾಗದಂತೆ ಉಳಿದಿದ್ದನು. ಶ್ರೀರಾಮಕೃಷ್ಣರ ಲೀಲಾ ನಾಟಕದಲ್ಲಿ ಆತನ ಪಾತ್ರ ತೆರೆಯ ಮರೆಯಲ್ಲಿದ್ದಿತು. ಕಾಳೀ ಮಂದಿರಕ್ಕೆ ಬರುವ ಭಕ್ತರು ಹಾಗೂ ಯಾತ್ರಿಕರಿಗೆ ಈತನ ಬಗ್ಗೆ ಗೊತ್ತಿರಲಿಲ್ಲ. ರಸಿಕನಿಗೂ ಅಷ್ಟೆ, ಶ್ರೀರಾಮಕೃಷ್ಣರು ಹಾಗೂ ಆತನನ್ನು ಕೆಲಸಕ್ಕೆ ನೇಮಿಸಿದ ಅಧಿಕಾರಿಗಳ ಹೊರತಾಗಿ ಮತ್ತಾರ ಪರಿಚಯವೂ ಇರಲಿಲ್ಲ. ದಕ್ಷಿಣೇಶ್ವರ ತೋಟದ ಹಾಗೂ ಮಂದಿರಕ್ಕೆ ಹೋಗುವ ಹಾದಿಗಳನ್ನು ಗುಡಿಸುವುದು, ಶೌಚಾಲಯವನ್ನು ತೊಳೆಯುವುದು ಮುಂತಾದ ಕೆಲಸಗಳನ್ನು ಅವನು ಮಾಡುತ್ತಿದ್ದನು. ಆತನ ತಿಂಗಳ ಸಂಬಳ ಒಂದು ಅಥವಾ ಎರಡು ರೂಪಾಯಿಗಳಿಗಿಂತ ಹೆಚ್ಚಾಗಿರಲಾರದು. (ಪೂಜಾರಿಯಾದ ಪರಮಹಂಸರ ಸಂಬಳವೇ ತಿಂಗಳಿಗೆ ೫ ರೂಪಾಯಿಯಾಗಿತ್ತು.)

ಜಪ, ಧ್ಯಾನ, ತಪಸ್ಸು, ಅಧ್ಯಯನಗಳ ಮೂಲಕ ಭಗವತ್ಸಾ ಕ್ಷಾತ್ಕಾರವನ್ನು ಪಡೆಯುವುದು ಸಾಮಾನ್ಯವಾದ ಹಾದಿ. ಆದರೆ ಕಠೋಪನಿಷತ್, "ಆತ್ಮವು ಯಾರನ್ನು ವರಿಸುವುದೋ ಅವರಿಗೆ ಒಲಿಯುವುದು" ಎನ್ನುತ್ತದೆ. ಇದರ ಅರ್ಥ ಭಗವಂತನ ದರ್ಶನ ಆತನ ಕೃಪೆಯಿಂದ ಮಾತ್ರವೇ ಸಾಧ್ಯ ಎಂದು. ರಸಿಕನು ಅವಿದ್ಯಾವಂತನಾದ ಕಾರಣ ಶಾಸ್ತ್ರದಲ್ಲಿ ಹೇಳಿರುವ ಸಾಧನೆಗಳು ಅವನಿಗೆ ಸಾಧ್ಯವಿರಲಿಲ್ಲ ಆದರೆ ಆತನು, ಸರಳ ಸ್ವಭಾವದವನೂ, ಧಾರ್ಮಿಕನೂ ಮತ್ತು ನಿಷ್ಕಪಟಿಯೂ ಆಗಿದ್ದನು. ಪರಮಹಂಸರಂತೂ ಸರಳತನವೇ ಮೂರ್ತಿವೆತ್ತವರು. ಆದ್ದರಿಂದಲೇ ಅವರು ರಸಿಕನಂತಹವನ ಮೇಲೂ ಕೃಪೆ ಮಾಡಿ ದರು.

ರಸಿಕನು ಪ್ರತಿದಿನವೂ ಪರಮಹಂಸರನ್ನು ದೂರದಿಂದಲೇ ನೋಡುತ್ತಿದ್ದನು. ತನ್ನ ಜಾತಿಯ ಕಾರಣದಿಂದಾಗಿ ಈ ಪೂಜಾರಿಗಳನ್ನು ಸ್ಪರ್ಶಿಸುವ ಮಾತಿರಲಿ, ಮಂದಿರದೊಳಗೂ ಹೋಗುವಂತಿರಲಿಲ್ಲ. ಶ್ರೀರಾಮಕೃಷ್ಣರ ಕೊಠಡಿಗೆ ಅನೇಕ ಜನರು ಬರುವುದನ್ನು ನೋಡಿ ಮನಸ್ಸಿನಲ್ಲೇ ನೊಂದುಕೊಂಡು ಹೀಗೆಂದು ಯೋಚಿಸುತ್ತಿದ್ದನು: "ನಾನು ಇಷ್ಟು ಹತ್ತಿರವಿದ್ದೇನೆ, ಆದರೂ ಅವರನ್ನು ನೋಡುವಂತಿಲ್ಲ, ಪಾದಗಳನ್ನು ಸ್ಪರ್ಶಿಸುವಂತಿಲ್ಲ. ನಾನೇನು ಅಂತಹ ಘೋರ ಅಪರಾಧ ಮಾಡಿದ್ದೇನೆ? ಪಾಪಿ, ಪುಣ್ಯವಂತರೆಂಬ ತಾರತಮ್ಯವಿಲ್ಲದೆ ಶ್ರೀರಾಮಕೃಷ್ಣರು ಅದೆಷ್ಟು ಜನರನ್ನು ಉದ್ಧರಿಸುತ್ತಿದ್ದಾರೆ! ಆದರೆ, ನಾನೆಂಥ ದೌರ್ಭಾಗ್ಯ ಶಾಲಿ!"

ಹೀಗೆ ಯೋಚಿಸುತ್ತಿದ್ದ ಅವನ ಮನಸ್ಸಿನಲ್ಲಿ ಅನೇಕ ವರ್ಷ ಗಳಿಂದ, ಒಂದು ಬಿರುಗಾಳಿಯೇ ಎದ್ದಿದ್ದ ಕಾರಣ, ಅವನಿಗೆ ಮನಃಶಾಂತಿಯೇ ಇಲ್ಲವಾಯಿತು. ದಿನವೂ ಪರಮಹಂಸರು ದೇಹಬಾಧೆ ತೀರಿಸಿಕೊಂಡು ಹಿಂದಿರುಗುತ್ತಿರುವಾಗ ರಸಿಕನು ಅವರ ಹಿಂದಿನಿಂದ ಹೋಗಿ, ಮಣ್ಣಿನಲ್ಲಿ ಮೂಡಿದ್ದ ಅವರ ಹೆಜ್ಜೆಯ ಗುರುತಿಗೇ ಭಕ್ತಿಯಿಂದ ನಮಿಸುತ್ತಿದ್ದನು. ಒಂದು ದಿನ ಮರದ ಹಿಂದೆ ಅಡಗಿ ನಿಂತಿದ್ದ ರಸಿಕನ ಯೋಚನಾಲಹರಿ ಹೀಗೆ ಸಾಗಿತ್ತು : "ಇನ್ನು ನಾನು ಸಹಿಸಲಾರೆ. ಏನಾದರಾಗಲಿ, ಇಂದು ದರ್ಶನ ಮಾಡಿಯೇ ತೀರುವೆ." ಪರಮಹಂಸರು ನಹಬತ್‌ಖಾನೆಯ ಕಡೆಗೆ ನಡೆದುಹೋಗುತ್ತಿರುವಾಗ ಓಡಿಹೋಗಿ

ಅವರ ಪಾದಗಳಿಗೆರಗಿದನು. "ತಂದೆ, ನನ್ನ ಗತಿ ಏನಾಗುವುದು?" ಎಂದು ಕಾತರದಿಂದ ಕೇಳಿದನು; ಕೂಡಲೇ ಸಮಾಧಿಸ್ಥರಾದ ಪರಮಹಂಸರ ಪಾದಗಳನ್ನು ತನ್ನ ಕಣ್ಣೀರಿನಿಂದ ತೊಳೆದನು. ಪ್ರಜ್ಞಾವಸ್ಥೆಗೆ ಬಂದ ಶ್ರೀರಾಮಕೃಷ್ಣರು, "ನಿನಗೆ ಎಲ್ಲವೂ ದೊರೆತಿದೆ" ಎಂದು ಆತನ ಶಿರಮುಟ್ಟಿ ಆಶೀರ್ವದಿಸಿದರು.

ತಾನು ಹುಟ್ಟಿಬಂದ ಸ್ಥಳ ಹೇಗೇ ಇದ್ದರೂ, "ಶ್ರೀರಾಮ ಕೃಷ್ಣರು ಅವತಾರ ಪುರುಷರು, ಜೀವಿಗಳ ಉದ್ಧಾರಕರು" ಎಂದು ಅರಿಯುವ ಸಾಮರ್ಥ್ಯವಿದ್ದ ರಸಿಕನು ಸಾಮಾನ್ಯ ವ್ಯಕ್ತಿಯಲ್ಲವೆಂದೇ ಹೇಳಬೇಕು. ಒಮ್ಮೆ ರಸಿಕನು ಮಾತನಾಡುತ್ತಿರುವಾಗ ಸ್ವಲ್ಪ ತೂರಾಡುತ್ತಿರುವುದನ್ನು ಕಂಡ ಪರಮಹಂಸರು, "ಹೆಚ್ಚಾಗಿ ಕುಡಿಯಬೇಡ, ಒಳ್ಳೆಯದಲ್ಲ" ಎಂದು ಸಲಹೆ ನೀಡಿದರು. ಕೂಡಲೇ ರಸಿಕನು ಶ್ರೀರಾಮಕೃಷ್ಣರ ಪಾದಗಳಿಗೆರಗಿ, "ತಂದೆ, ನನಗೆ ಯಾರು ತಾನೇ ಕುಡಿಯಲು ಹಣ ಕೊಡುತ್ತಾರೆ? ನನ್ನಲ್ಲಿ ಹಣವಿಲ್ಲ. ಅದೃಷ್ಟವಶಾತ್, ನಟವರ ಪಂಚಾನನ ತಾಯಿ ತೀರಿ ಕೊಂಡಳು, ಆದ್ದರಿಂದ ಹೆಚ್ಚುವರಿ ಕೆಲಸ ಮಾಡಿದ್ದಕ್ಕಾಗಿ ಹಣ ದೊರೆಯಿತು. ಆದರೆ ಯಾರ ತಾಯಂದಿರು ತಾನೆ ದಿನಾ ಸಾಯುವರು, ತಂದೆ? ನಾನು ಸತ್ತ ಮೇಲೆ ಅವರೆಲ್ಲಾ ಸಾಯು ವರು" ಎಂದನು ಮುಗ್ಧನಂತೆ!

'ಶ್ರೇಷ್ಠ ಗುರುವಾದವನು ಶ್ರೇಷ್ಠ ಶಿಷ್ಯನೂ ಕೂಡ' ಎನ್ನುವ ಕ್ರಿಸ್ಟೋಫರ್ ಇಶರ್‌ವುಡ್ ಅವರ ಹೇಳಿಕೆಗೆ ಪರಮಹಂಸರ ಜೀವನ ಜ್ವಲಂತ ಉದಾಹರಣೆ. "ನಾನು ಬದುಕಿರುವವರೆಗೂ ಕಲಿಯುತ್ತೇನೆ" ಎನ್ನುತ್ತಿದ್ದ ಶ್ರೀರಾಮಕೃಷ್ಣರು ಎಂದಿಗೂ ತಮ್ಮ ಹೃದಯಕ್ಕೆ ಕವಾಟವನ್ನು ಹಾಕಲಿಲ್ಲ. ಜಾಡಮಾಲಿಗಳು, ಕುಡುಕರು ಎಂಬ ಭೇದಭಾವವಿಲ್ಲದೆ ಎಲ್ಲರಿಂದಲೂ ಅವರು ಕಲಿಯುತ್ತಿದ್ದರು. ಪರಮಹಂಸರ ಜೀವನದಲ್ಲಿ ರಸಿಕನ ಪಾತ್ರ ಅತ್ಯಂತ ಮಹತ್ವದ್ದು ಎಂಬುದು ಅನೇಕರಿಗೆ ತಿಳಿಯದು. ಶ್ರೀರಾಮಕೃಷ್ಣರು ತಮ್ಮ ಸಾಧನೆಯ ವೇಳೆಯಲ್ಲಿ ಅಷ್ಟಪಾಶಗಳಿಂದ ಮುಕ್ತವಾಗಲು ತೀವ್ರವಾಗಿ ಪ್ರಯತ್ನಿಸುತ್ತಿದ್ದರು. ಮನುಷ್ಯನು ಘೃಣ, ಲಜ್ಜೆ, ಕುಲ, ಶೀಲ, ಭಯ, ಮಾನ, ಜಾತಿ ಮತ್ತು ಅಭಿಮಾನ – ಈ ಎಂಟು ಪಾಶಗಳಿಂದ ಬದ್ಧನಾಗಿರುವನು. ಕೇವಲ ಮಾನಸಿಕವಾಗಿ ಅಲ್ಲದೆ ಭೌತಿಕವಾಗಿಯೂ ಅವುಗಳನ್ನು ಪರಮಹಂಸರು ತ್ಯಾಗಮಾಡಿದರು. ಯಜ್ಞೋಪವೀತವನ್ನು ಕಳಚಿಹಾಕಿ ಧ್ಯಾನ ಮಾಡುವುದು, 'ಮಣ್ಣು ಹಣ, ಹಣ ಮಣ್ಣು' ಎಂದು ಒಂದು ಕೈಯಲ್ಲಿ ಮಣ್ಣು, ಮತ್ತೊಂದ ರಲ್ಲಿ ಹಣ ಹಿಡಿದುಕೊಂಡು ಗಂಗೆಗೆ ಎಸೆಯುವುದು, ದೀನರು, ಅನಾಥರಿಗೆಲ್ಲಾ ಊಟವಾದ ಮೇಲೆ ಅವರ ಎಂಜಲನ್ನು ಪ್ರಸಾದದ ರೂಪದಲ್ಲಿ ಭಕ್ತಿಯಿಂದ ತಿಂದು ತಲೆಗೆ ಒತ್ತಿಕೊಳ್ಳುವುದು – ಇವೇ ಮುಂತಾದ ಸಾಧನೆಗಳನ್ನು ಆ ಸಮಯದಲ್ಲಿ ಮಾಡುತ್ತಿದ್ದರು. ಬ್ರಾಹ್ಮಣ ಕುಲದಲ್ಲಿ ಜನಿಸಿದ ಅಭಿಮಾನವನ್ನು ತೊರೆಯಲು ನಡುರಾತ್ರಿ ರಸಿಕನ ಮನೆಯ ಪಾಯಖಾನೆಯನ್ನು ತಮ್ಮ ತಲೆಗೂದಲಿನಿಂದ ಉಜ್ಜಿ ತೊಳೆಯುತ್ತಿದ್ದರು!

ಬ್ರಾಹ್ಮಣನಾದವನು ಮನೆಯಿಂದ ಹೊರಗೆ ಬರುವಾಗ ಜಾಡ ಮಾಲಿಯ ಮುಖವನ್ನು ಮೊದಲು ಕಂಡರೆ, ಆ ದಿನವೆಲ್ಲಾ ಉಪವಾಸ, ಪೂಜೆ, ಪ್ರಾರ್ಥನೆಗಳಲ್ಲಿ ಕಳೆಯುವುದೇ ಪ್ರಾಯಶ್ಚಿತ್ತ ವೆನ್ನುತ್ತಿದ್ದ ಆ ಕಾಲದಲ್ಲಿ ಶ್ರೀರಾಮಕೃಷ್ಣರ ಈ ಪರಮಾದ್ಭುತ ಚರ್ಯೆ ಊಹೆಗೂ ನಿಲುಕದ್ದು. ಈ ಘಟನೆಯ ಕುರಿತು ಅವರೇ ಮುಂದೆ ಹೀಗೆನ್ನುತ್ತಿದ್ದರು:

"ಚಿತ್‌ಶಕ್ತಿಯೇ ಮಹಾಮಾಯೆಯ ಚತುರ್ವಿಂಶತಿ ತತ್ತ್ವ ಗಳಾಗಿರುವುದನ್ನು ನಾನು ಕಂಡೆ. ಒಮ್ಮೆ ನಾನು ಧ್ಯಾನ ದಲ್ಲಿರುವಾಗ ಮನಸ್ಸು ಅಲೆಯುತ್ತಾ ರಸಿಕನ ಮನೆಗೆ ಹೋಯಿತು. ಆತ ಒಬ್ಬ ಜಾಡಮಾಲಿ. ನಾನು ನನ್ನ ಮನಸ್ಸಿಗೆ ಹೇಳಿದೆ, 'ಹೇ ಮನಸ್ಸೇ, ನೀನು ಇಲ್ಲೇ ಇರು' ಎಂದು. ತಾಯಿ ಆ ಮನೆಯವ ರೆಲ್ಲರಲ್ಲೂ ಅದೇ ಚಿತ್‌ಶಕ್ತಿಯ ಅಂಶವಿರುವುದನ್ನು ತೋರಿಸಿದಳು. ಅಳುತ್ತಾ ತಾಯಿಯನ್ನು ಪ್ರಾರ್ಥಿಸುತ್ತಿದ್ದೆ, 'ಓ ತಾಯಿ, ನನ್ನನ್ನು ಜಾಡಮಾಲಿಯ ಸೇವಕನನ್ನಾಗಿ ಮಾಡು. ನಾನು ಅವರಿಗಿಂತಲೂ ಅಧಮ ಎಂದು ಮನವರಿಕೆ ಮಾಡು' "– ಹೀಗೆ ಶ್ರೀರಾಮಕೃಷ್ಣರು ತಮ್ಮನ್ನು ಬಂಧಿಸಿರುವ ಉಪಾಧಿಗಳನ್ನು ಕಿತ್ತೊಗೆಯುತ್ತಿದ್ದರು. ರಸಿಕನು ಅತ್ಯಂತ ಉಚ್ಚಮಟ್ಟದ ಭಕ್ತ. ಅವನಿಗರಿವಿಲ್ಲದೆ ಪರಮ ಹಂಸರ ಸಾಧನೆಗೆ ಹೀಗೆ ಸಹಾಯಕನಾಗಿದ್ದ.

ತನ್ನ ಕೊನೆಗಾಲ ಹತ್ತಿರವಾಗುತ್ತ ಬರಲು ರಸಿಕನು ಕೆಲಸಕ್ಕಾಗಿ ದಕ್ಷಿಣೇಶ್ವರಕ್ಕೆ ಬರುವುದನ್ನು ನಿಲ್ಲಿಸಿಬಿಟ್ಟನು. ಬದಲಾಗಿ ಆತನ ಮಗಳು ನಿತ್ಯವೂ ಬಂದು ಗುಡಿಸುವ ಕೆಲಸವನ್ನು ಮಾಡುತ್ತಿದ್ದಳು. ಶ್ರೀರಾಮಕೃಷ್ಣರ ಆದೇಶದಂತೆ ರಸಿಕನು ಮನೆಯ ಮುಂದೆ ಒಂದು ತುಳಸಿಕಟ್ಟೆಯನ್ನು ನಿರ್ಮಿಸಿ ಅಲ್ಲಿಯೇ ಕುಳಿತು ಜಪ, ಪ್ರಾರ್ಥನೆ ಗಳಲ್ಲಿ ದಿನವನ್ನು ಕಳೆಯುತ್ತಿದ್ದನು. ಒಂದು ದಿನ ವಿಪರೀತ ಬಿಸಿಲು. ಜ್ವರದಿಂದ ನರಳುತ್ತಿದ್ದ ರಸಿಕನು ತನ್ನನ್ನು ತುಳಸಿ ಕಟ್ಟೆಯ ಬಳಿ ಕರೆದೊಯ್ಯಬೇಕೆಂದು ಮತ್ತು ಎಲ್ಲರೂ ಬೇಗನೆ ಊಟ ಮಾಡಬೇಕೆಂದು, ತಾನು ಕರೆಯುವವರೆಗೂ ಯಾರೂ ಹತ್ತಿರ ಬರಬಾರದೆಂದು ಆಜ್ಞಾಪಿಸಿದನು. ಆಗ ಸಮಯ ಬೆಳಗ್ಗೆ ಹತ್ತು ಗಂಟೆ. ಎಲ್ಲರೂ ವಿಧಿಯಿಲ್ಲದೆ ಆತನ ಆದೇಶವನ್ನು ಪಾಲಿಸಿದರು. ನಂತರ ಕೈಯಲ್ಲಿ ಜಪಮಾಲೆ ಹಿಡಿದು ಒಂದು ಚಾಪೆಯ ಮೇಲೆ ಮಲಗಿದನು; ಭಗವಂತನ ನಾಮಸ್ಮರಣೆ ಮಾಡಲು ತನ್ನ ಸುತ್ತ ಕುಳಿತವರಿಗೆಲ್ಲಾ ಹೇಳಿದನು. ಅರ್ಧಗಂಟೆಯ ನಂತರ ಆತನ ಮುಖ ಇದ್ದಕ್ಕಿದಂತೆ ಬೆಳಗಿತು. "ಓಹ್! ತಂದೆ, ಕೊನೆಗೂ ನೀವು ಬಂದಿರಾ! ನನ್ನನ್ನು ಮರೆಯಲಿಲ್ಲವೆಂದಾಯಿತು. ಎಂತಹ ಸೌಂದರ್ಯ ಮತ್ತು ಬೆಳಕು . . . ." ಹೀಗೆನ್ನುತ್ತಾ ಶಾಂತ ಮುಖ ಭಾವದಲ್ಲಿ ಸಂತೃಪ್ತಿಯಿಂದ ರಸಿಕನು ಕಣ್ಣುಮುಚ್ಚಿದನು.

ಶ್ರೀರಾಮಕೃಷ್ಣರ ದಿವ್ಯ ನಾಟಕದಲ್ಲಿ ರಸಿಕನು ಬಹಳ ಪ್ರಮುಖ ನಟನಲ್ಲದಿರಬಹುದು. ಆದರೂ ಅವನು ವಹಿಸಿದ ಪಾತ್ರ ಅತಿ ಮಹತ್ವದ್ದು. 'ಕಾಯಕವೇ ಕೈಲಾಸ', 'ಎಲ್ಲರೂ ಅವರವರ ಸ್ಥಾನದಲ್ಲಿ ದೊಡ್ಡವರೇ' – ಈ ಹೇಳಿಕೆಗಳನ್ನು ರಸಿಕನು ತನ್ನ ನಿಜ ಜೀವನ ದಲ್ಲಿ ಚೆನ್ನಾಗಿ ನಿರೂಪಿಸಿದನು ಎಂದರೆ ಅತಿಶಯೋಕ್ತಿಯಾಗದು.

*(ಮುಗಿಯಿತು)*